**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ : ಎ.ಡಿ.ಎಂ 2(2) ಪೋ.ಕಾ.ಅನುಷ್ಠಾನ 01/2022-23

ದಿನಾಂಕ:08.11.2022

## ಸುತ್ತೋಲೆ

**ವಿಷಯ**: ರಾಜ್ಯದ ಎಲ್ಲಾ ಶಾಲೆಗಳಲ್ಲಿ ಪೋಕ್ಸೋ ಕಾಯಿದೆ 2012ಅನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಕುರಿತು

**ಉಲ್ಲೇಖ**:1. ಭಾರತ ಸರ್ಕಾರ ಜಾರಿ ಮಾಡಿರುವ ಪೋಕ್ಸೋ ಕಾಯಿದೆ 2012 ರಂತೆ

2. ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016

3.ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಎಸ್.ಓ.ಪಿ ಮತ್ತು ಮಾರ್ಗಸೂಚಿ ಅನುಸಾರ

4.ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ ಸಿ7(2)ಪ್ರಾ.ಶಿ.ಅ/ಶಾ.ಮಾ.ಲೈ.ಕಿ 40/14-15 ದಿನಾಂಕ:23.07.2014 ಮತ್ತು ಸಿ7(2)ಪ್ರಾ.ಶಿ.ಅ/ಮಕ್ಕಳ ಸುರಕ್ಷತೆ 40/14-15 ದಿನಾಂಕ:28.07.2016

5. Juvenile Justice Committee, High Cousrt of Karnataka Bangalore ಈ ಸಮಿತಿಯು ದಿನಾಂಕ:05.11.2022 ರಂದು ನಡೆಸಿದ ಪೋಕ್ಸೋ ಕಾಯಿದೆ -2012ರ ಪ್ರಗತಿ ಪರಿಶೀಲನಾ ಸಭೆಯ ನಡಾವಳಿಯನ್ವಯ

*******

ವಿಷಯಾನ್ವಯವಾಗಿ ಉಲ್ಲೇಖ-1ರನ್ವಯ 18 ವರ್ಷದೊಳಗಿನ ಮಕ್ಕಳ ಮೇಲೆ ಪದೇ ಪದೇ ಲೈಂಗಿಕ ದೌರ್ಜನ್ಯಗಳು, ಕಿರುಕುಳ, ಅತ್ಯಾಚಾರಗಳು ನಡೆಯುತ್ತಿದ್ದು, ಈ ರೀತಿಯ ದುರ್ಘಟನೆಗಳನ್ನು ತಡೆಗಟ್ಟಲು ಹಾಗೂ ಮಕ್ಕಳಿಗೆ ರಕ್ಷಣೆ , ಭದ್ರತೆ ಮತ್ತು ನ್ಯಾಯ ಒದಗಿಸುವುದರ ಜೊತೆಗೆ ಅವರ ಆಸಕ್ತಿ ಮತ್ತು ಹಿತ ಕಾಪಾಡುವ ಉದ್ದೇಶಗಳನ್ನು ಇರಿಸಿಕೊಂಡು ಪೋಕ್ಸೋ ಕಾಯಿದೆ-2012ನ್ನು ಭಾರತ ಸರ್ಕಾರವು ಜಾರಿಗೆ ತಂದಿರುತ್ತದೆ.

ರಾಜ್ಯದಲ್ಲಿನ ಪ್ರತಿಯೊಂದು ಮಗುವು ಎಲ್ಲಾ ಸಂದರ್ಭಗಳಲ್ಲಿಯೂ ಎಲ್ಲಾ ರೀತಿಯ ಹಿಂಸೆ, ನಿರ್ಲಕ್ಷ್ಯ ಮತ್ತು ಶೋಷಣೆಯಿಂದ ರಕ್ಷಣೆ ಮತ್ತು ಸುರಕ್ಷತೆಯನ್ನು ಹೊಂದುವ ಸಲುವಾಗಿ ಎಲ್ಲಾ ಸಾಮಾಜಿಕ ವಲಯಗಳು ವಿಶೇಷವಾಗಿ ಸಮಾಜ ಕಲ್ಯಾಣ, ಶಿಕ್ಷಣ, ಆರೋಗ್ಯ, ಭದ್ರತೆ ಮತ್ತು ಸಾಮಾಜಿಕ ನ್ಯಾಯವನ್ನು ಮಕ್ಕಳಿಗೆ ದೊರಕಿಸಿಕೊಡುವ ನಿಟ್ಟಿನಲ್ಲಿ ರಾಜ್ಯದಲ್ಲಿ ಲಿಂಗತ್ವ ನಾಗರೀಕತೆಯೂ ಸೇರಿದಂತೆ ಎಲ್ಲಾ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಬೌಗೋಳಿಕ ಇತ್ಯಾದಿ ತಾರತಮ್ಯಗಳನ್ನು ತೊಡೆದು ಹಾಕಲು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ 2016ನ್ನು ಉಲ್ಲೇಖ-2ರಂತೆ ರಾಜ್ಯ ಸರ್ಕಾರವು ಜಾರಿಗೊಳಿಸಿರುತ್ತದೆ.

ರಾಜ್ಯದ ಎಲ್ಲಾ ಶಾಲೆಗಳಲ್ಲಿ ಪೋಕ್ಸೋ ಕಾಯಿದೆ 2012 ಮತ್ತು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನೀತಿ-2016ನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆಗಳು, ಶಾಲೆಗಳು, ಆಡಳಿತ ಮಂಡಳಿಗಳು, ಪೋಷಕರು ಎಸ್.ಡಿ.ಎಂ.ಸಿ ಹಾಗೂ ಇತರರು ಸೇರಿದಂತೆ ಎಲ್ಲಾ ಪಾಲುದಾರರು/ ಬಾಗಿದಾರರು All Stake holders ಕೈಗೊಳ್ಳಬೇಕಾದ ಕ್ರಮಗಳನ್ನು ಒಳಗೊಂಡ ಪ್ರಮಾಣೀಕೃತ ಕಾರ್ಯಚರಣಾ ವಿಧಾನ (SOP)ನ್ನು ಮತ್ತು ಮಾರ್ಗಸೂಚಿಯನ್ನು ಉಲ್ಲೇಖ-3ರಲ್ಲಿ ಹೊರಡಿಸಿರುತ್ತದೆ.

ಪೋಕ್ಸೋ ಕಾಯಿದೆ-2012ನ್ನು ಕಳೆದ 10 ವರ್ಷಗಳಿಂದ ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿರುವ ಕುರಿತು ಉಲ್ಲೇಖ-5ರಂತೆ All Stake holders ಗಳಿಗೆ ನಡೆದ ಪ್ರಗತಿ

ಪರಿಶೀಲನಾ ಸಭೆಯನ್ನು ನಡೆಸಿ ಪುನರಾವಲೋಕನಾ ಮಾಡಲಾಯಿತು. ಈ ಸಭೆಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆ ಸಂಬಂಧ ಅರಿವು ಮೂಡಿಸಲು ಹಾಗೂ ಮತ್ತಷ್ಟು ಕಟ್ಟುನಿಟ್ಟಿನ ಕ್ರಮಗಳನ್ನು ಪಾಲಿಸಲು ಸೂಚಿಸಲಾಗಿದೆ.

ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನ ರಹಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಲೈಂಗಿಕ ಕಿರುಕುಳ ಹಾಗೂ ಇತರೆ ದೌರ್ಜನ್ಯಗಳ ಪ್ರಕರಣಗಳನ್ನು ತಡೆಗಟ್ಟುವ ಸಲುವಾಗಿ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆ ಸಂಬಂಧ ಕಡ್ಡಾಯವಾಗಿ ಪೋಕ್ಸೋ ಕಾಯಿದೆ-2012, ಮಕ್ಕಳ ರಕ್ಷಣಾ ನೀತಿ-2016 ಮತ್ತು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಎಸ್.ಓ.ಪಿ ಮತ್ತು ಮಾರ್ಗಸೂಚಿ ಹಾಗೂ ಇಲಾಖೆಯಿಂದ ಕಾಲಕಾಲಕ್ಕೆ ನೀಡಲಾಗಿರುವ ಎಲ್ಲಾ ಅಂಶಗಳನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಪಾಲಿಸಲು ಆದೇಶಿಸಿದೆ.

**Customized Child Care Policy** ಪೋಕ್ಸೋ ಕಾಯಿದೆ-2012, ಮಕ್ಕಳ ರಕ್ಷಣಾ ನೀತಿ-2016 ಮತ್ತು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಎಸ್.ಓ.ಪಿ ಮತ್ತು ಮಾರ್ಗಸೂಚಿ ಹಾಗೂ ಇಲಾಖೆಯಿಂದ ಕಾಲಕಾಲಕ್ಕೆ ನೀಡಲಾಗಿರುವ ಎಲ್ಲಾ ಅಂಶಗಳನ್ನು ಅಳವಡಿಸಿಕೊಂಡು ಶಾಲೆಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳು, ಸೌಕರ್ಯಗಳಿಗನುಗುಣವಾಗಿ ಮಕ್ಕಳ ಸುರಕ್ಷತೆ ಬಗ್ಗೆ ಕ್ರಮವಹಿಸುವುದು.

**"ಮಕ್ಕಳ ಸುರಕ್ಷಾ ಸಮಿತಿ'' :** ಪ್ರತಿ ಶಾಲೆಯಲ್ಲಿ "ಮಕ್ಕಳ ಸುರಕ್ಷಾ ಸಮಿತಿ" ಯನ್ನು ಶಾಲಾ ಮಟ್ಟದಲ್ಲಿ ರಚಿಸತಕ್ಕದ್ದು. ಈ ಸಮಿತಿಯಲ್ಲಿ ಶಾಲಾ ಮುಖ್ಯಸ್ಥರು/ಶಾಲೆಯ ಆಡಳಿತ ಮಂಡಳಿಯವರು ಈ ಸಮಿತಿಯ ಅಧ್ಯಕ್ಷರಾಗಿದ್ದು, ಕನಿಷ್ಠ- ಇಬ್ಬರು ಶಿಕ್ಷಕರು, (ಒಬ್ಬರು ಮಹಿಳೆ ) ಮೂವರು ಪೋಷಕರು, ಎಸ್.ಡಿ.ಎಂ.ಸಿ ಅಧ್ಯಕ್ಷರು ಇಬ್ಬರು ಮಕ್ಕಳು ಹಾಗೂ ಒಬ್ಬರು ಆರೋಗ್ಯ ಇಲಾಖೆಯ ಅಧಿಕಾರಿ/ಸಿಬ್ಬಂದಿ ಒಳಗೊಂಡಂತೆ ಸಮಿತಿ ರಚಿಸುವುದು.
ಈ ಸಭೆಯು ಪ್ರತಿ ತಿಂಗಳಿಗೊಮ್ಮೆ ಕಡ್ಡಾಯವಾಗಿ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸುವುದು. ಸದರಿ ಸಭೆಯಲ್ಲಿ ಮಕ್ಕಳ ರಕ್ಷಣೆ , ಹಕ್ಕುಗಳ ಬಗ್ಗೆ ಚರ್ಚಿಸುವುದರೊಂದಿಗೆ ಅರಿವು ಮೂಡಿಸುವುದು ಹಾಗೂ ಆಪ್ತ ಸಮಾಲೋಚನೆ ಮಾಡುವುದು. ಈ ಸಂಬಂಧ ಎಲ್ಲಾ ಶಾಲೆಗಳಲ್ಲಿ ದಾಖಲೆಗಳನ್ನು ಇಡುವುದು. ಮಕ್ಕಳ ಸುರಕ್ಷತೆ ಸಂಬಂಧ ಏನಾದರೂ ಅಡಚಣೆ ತೊಂದರೆ ಉಂಟಾದಲ್ಲಿ ಸಂಬಂಧಿಸಿದವರಿಗೆ ಹಾಗೂ ಇಲಾಖೆಗಳಿಗೆ ನೆರವು ನೀಡುವುದು.

**ಮಕ್ಕಳ ಸಹಾಯವಾಣಿ 1098:** ಪ್ರತಿ ಶಾಲೆಯಲ್ಲೂ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಅನ್ನು ಗೋಡೆ ಬರಹದಲ್ಲಿ ಬರೆಸುವುದು. ಮತ್ತು ಈ ಬಗ್ಗೆ ವ್ಯಾಪಕ ಪ್ರಚಾರ ನಡೆಸುವುದು. ಹಾಗೂ ಹದಿಹರೆಯದ ಮಕ್ಕಳು ಮಾನಸಿಕವಾಗಿ ತೊಂದರೆ/ಸಮಸ್ಯೆಗೊಳಗಾದಲ್ಲಿ ಮಕ್ಕಳ ನಿರ್ದೇಶನಾಲಯವು ಮಕ್ಕಳಿಗಾಗಿ ಉಚಿತ ಆಪ್ತ ಸಮಾಲೋಚನಾ ಸೇವೆ ಒದಗಿಸಲು 14499 ಟೋಲ್ ಫ್ರೀ ಸಂಖ್ಯೆಯನ್ನು ಬಿಡುಗಡೆ ಮಾಡಿದ್ದು, ಈ ಸಂಖ್ಯೆಯ ಬಗ್ಗೆ ಶಾಲೆಗಳಲ್ಲಿ ಪ್ರಚಾರ ಮಾಡುವುದು.

**ದೂರು ಮತ್ತು ಸಲಹಾ ಪೆಟ್ಟಿಗೆ:** ಎಲ್ಲಾ ಶಾಲೆಗಳಲ್ಲಿ ದೂರು ಮತ್ತು ಸಲಹಾ ಪೆಟ್ಟಿಗೆಯನ್ನು ಮಕ್ಕಳಿಗೆ ಮಕ್ಕಳಿಗೆ ನಿಲುಕುವಂತಹ ಎತ್ತರದಲ್ಲಿ ದೂರು/ಸಲಹಾ ಪಟ್ಟಿಗೆಗಳನ್ನು ಹಾಕುವುದು

ಬೀಗ ಹಾಕಿ ಅಳವಡಿಸುವುದು. ಸಲಹಾ ಪೆಟ್ಟಿಗೆಯನ್ನು ಕನಿಷ್ಠ ವಾರಕ್ಕೊಮ್ಮೆ ಮಕ್ಕಳ ಸುರಕ್ಷತಾ ಸಮಿತಿಯ ಸಮ್ಮುಖದಲ್ಲಿ ತೆರೆಯುವುದು ಮತ್ತು ದೂರು ಸ್ವೀಕೃತ ಅರ್ಜಿಗಳಿಗೆ ನಿಯಮಾನುಸಾರ ಇತ್ಯರ್ಥಗೊಳಿಸಲು ಕ್ರಮವಹಿಸುವುದು.

**ಪೋಷಕರ ಸಭೆ:**

ಪೋಷಕರ ಸಭೆಯಲ್ಲಿ ಪೋಕ್ಸೋ ಕಾಯಿದೆ-2012, ಮಕ್ಕಳ ರಕ್ಷಣಾ ನೀತಿ-2016 ಮತ್ತು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಎಸ್.ಓ.ಪಿ ಮತ್ತು ಮಾರ್ಗಸೂಚಿಗೆ ಸಂಬಂಧಿಸಿದಂತೆ ಅರಿವು ಮೂಡಿಸುವುದು. ಶಾಲಾ ಅವಧಿ ಹಾಗೂ ತರಗತಿವಾರು ವೇಳಾಪಟ್ಟಿ ಮತ್ತು ಅನುಮೋದಿತ ವಿಶೇಷ ತರಗತಿಗಳ ವೇಳಾಪಟ್ಟಿಯನ್ನು ಪೋಷಕರಿಗೆ ನೀಡುವುದು. ಮಕ್ಕಳೊಂದಿಗೆ ಒಳ್ಳೆಯ ಬಾಂದವ್ಯವನ್ನು ಇಟ್ಟುಕೊಳ್ಳುವುದು. ಮಕ್ಕಳ ಸುರಕ್ಷತೆ ಹಾಗೂ ಹಕ್ಕುಗಳ ಸಂಬಂಧ ಸಮಸ್ಯೆ ಉಂಟಾಗಿದ್ದಲ್ಲಿ ನೇರವಾಗಿ ಶಾಲಾ/ಸಂಸ್ಥೆಯ ಮುಖ್ಯಸ್ಥರ ಗಮನಕ್ಕೆ ತರುವ ಬಗ್ಗೆ ಪೋಷಕರಿಗೆ ಸೂಚನೆ ನೀಡುವುದು.

ಮಕ್ಕಳ ಸುರಕ್ಷತೆ ಉಲ್ಲಂಘನೆ ಸಂಬಂಧ ಯಾವುದಾದರೂ ಸಮಸ್ಯೆ ಇದ್ದಲ್ಲಿ ಮಕ್ಕಳ ರಕ್ಷಣಾ ನೀತಿ-2016 ಮತ್ತು ಎಸ್.ಓ.ಪಿ ರನ್ವಯ ಶಾಲಾ/ಸಂಸ್ಥೆಯ ಮುಖ್ಯಸ್ಥರುಗಳು ಹಾಗೂ ಇಲಾಖಾ ಅಧಿಕಾರಿಗಳು ಕ್ರಮವಹಿಸುವುದು.

**ಶಾಲಾ/ಸಂಸ್ಥೆ ಮುಖ್ಯಸ್ಥರು ಹಾಗೂ ಶಿಕ್ಷಕರು, ಸಿಬ್ಬಂದಿಗಳ ಜವಾಬ್ದಾರಿಗಳು:**

ಈ ಮೇಲ್ಕಂಡ ಅಂಶಗಳ ಕಾರ್ಯನಿರ್ವಹಣೆ ಜೊತೆಗೆ ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ.
ಮಕ್ಕಳ ಹಕ್ಕುಗಳ ರಕ್ಷಣೆ ಸಂಬಂಧ ಕಡ್ಡಾಯವಾಗಿ ಪೋಕ್ಸೋ ಕಾಯಿದೆ-2012, ಮಕ್ಕಳ ರಕ್ಷಣಾ ನೀತಿ-2016 ಮತ್ತು ಎಸ್.ಓ.ಪಿ ಮಾರ್ಗಸೂಚಿ ಹಾಗೂ ಇಲಾಖೆಯಿಂದ ಕಾಲಕಾಲಕ್ಕೆ ನೀಡಲಾಗಿರುವ ಎಲ್ಲಾ ಅಂಶಗಳನ್ನು ಅಳವಡಿಸಿಕೊಳ್ಳುವುದರ ಜೊತೆಗೆ ಶಾಲೆಗಳಲ್ಲಿ ಅನುಪಾಲನೆ ಮಾಡುವುದು.

ಆರ್.ಟಿ.ಇ ಕಾಯಿದೆ 2009ರ ನಿಯಮ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ) 2020 ರಡಿ ಬರುವ ಎಲ್ಲಾ ಮಕ್ಕಳಿಗೆ ಶಾಲೆಯಲ್ಲಿ ದಾಖಲಾತಿ ಮಾಡಿಕೊಂಡು ಅವರಿಗೆ ಒದಗಿಸಬೇಕಾದ ಎಲ್ಲಾ ಸೌಕರ್ಯಗಳನ್ನು ವಿಸ್ತರಿಸಿ ಗುಣಮಟ್ಟದ ಶಿಕ್ಷಣ ನೀಡುವುದು ಸರ್ಕಾರ ಮತ್ತು ಇಲಾಖೆಯ ಆದ್ಯ ಕರ್ತವ್ಯವಾಗಿದೆ. ಅದರಂತೆ ಎಲ್ಲಾ ಇಲಾಖಾಧಿಕಾರಿಗಳು, ಶಿಕ್ಷಕರು, ಸಿಬ್ಬಂದಿ ಗಳು ಯಾವುದೇ ಮಕ್ಕಳು ಶಾಲೆಯಿಂದ ಹೊರಗುಳಿಯದಂತೆ ಮತ್ತು ಶಿಕ್ಷಣದಿಂದ ವಂಚಿತರಾಗದಂತೆ ನೋಡಿಕೊಳ್ಳುವ ಸಂಬಂಧ ಅಗತ್ಯ ಕ್ರಮವಹಿಸುವುದು.

ಶಾಲೆಗೆ ಆವರಣದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ವ್ಯಕ್ತಿಗಳು ಕಡ್ಡಾಯವಾಗಿ ಅಧಿಕೃತ ಗುರುತಿನ ಚೀಟಿಗಳನ್ನು ಹೊಂದಿರತಕ್ಕದ್ದು. ಹಾಗೂ ಈ ವ್ಯಕ್ತಿಗಳ ಪೂರ್ಣ ವಿವರದ ದಾಖಲೆಗಳನ್ನು ಶಾಲೆಯಲ್ಲಿ ಇಟ್ಟಿರಬೇಕು.

ಎಲ್ಲಾ ಶಾಲೆಗಳಲ್ಲಿ ಘನ ಸರ್ವೋಚ್ಚನ್ಯಾಯಾಲಯದ ತೀರ್ಪಿನ ಆದೇಶದಂತೆ ಸರ್ಕಾರ ಹಾಗೂ ಇಲಾಖೆಯಿಂದ ನೀಡಲಾದ ನಿರ್ದೇಶನದಂತೆ ಶಾಲಾ ಕಟ್ಟಡ ಹಾಗೂ ಜಾಗದ ಸಂಬಂಧ ಸಂಪೂರ್ಣ ಸುರಕ್ಷತ ಕ್ರಮಗಳನ್ನು ಅಳವಡಿಸುವುದು

ಶಾಲೆಯ ನಿಗಧಿತ ಅವಧಿಯ ಕನಿಷ್ಠ ಅರ್ಧ ಗಂಟೆ ಮೊದಲು ಶಾಲೆಯಲ್ಲಿ ಮುಖ್ಯ ಶಿಕ್ಷಕರು, ಶಿಕ್ಷಕರು, ಮತ್ತು ಸಿಬ್ಬಂದಿ ಹಾಜರಿರುವುದು. ಮಕ್ಕಳ ಹಾಜರಾತಿಯನ್ನು ಬೆಳಗ್ಗೆ ಮತ್ತು ಮದ್ಯಾಹ್ನದ ನಿಗಧಿತ ಅವಧಿಯಲ್ಲಿ ತಪ್ಪದೆ ದಾಖಲಿಸುವುದರೊಂದಿಗೆ ಮಕ್ಕಳು ನಿಗಧಿತ ಅವಧಿಯಲ್ಲಿ ಶಾಲೆಯಲ್ಲಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು. ಯಾವುದೇ ಕಾರಣಕ್ಕೂ ಮಕ್ಕಳನ್ನು ಯಾವುದೇ ಕಾರ್ಯದ ನಿಮಿತ್ತ ಹೊರಗೆ ಕಳುಹಿಸಬಾರದು. ಶಾಲೆ ಮುಗಿದ ನಂತರ ಯಾವುದೇ ಮಗು ಶಾಲೆ/ಆವರಣ/ಶೌಚಾಲಯ/ತರಗತಿಯಲ್ಲಿ ಇಲ್ಲದಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು.

ಶಾಲಾ ಅವಧಿ ಹಾಗೂ ತರಗತಿವಾರು ಶಾಲಾ ವೇಳಾಪಟ್ಟಿಯನ್ನು ಮಕ್ಕಳಿಗೆ ಹಾಗೂ ಪೋಷಕರಿಗೆ ನೀಡುವುದು. ವಿಶೇಷ ತರಗತಿಗಳನ್ನು ನಡೆಸಲು ಅನುಮೋದಿತ ವೇಳಾಪಟ್ಟಿಯನ್ನು ಪೋಷಕರಿಗೆ ಒದಗಿಸುವುದು. ವಿಶೇಷ ತರಗತಿಗಳು ನಡೆಯುವ ವೇಳೆಯಲ್ಲಿ ಮುಖ್ಯ ಶಿಕ್ಷಕರು, ವಿಷಯ ಶಿಕ್ಷಕರು, ದೈಹಿಕ ಶಿಕ್ಷಕರು, ಹಾಗೂ ಒಬ್ಬ ಮಹಿಳಾ ಶಿಕ್ಷಕರು ಕಡ್ಡಾಯವಾಗಿ ಹಾಜರಿರತಕ್ಕದ್ದು. ವಿಶೇಷ ತರಗತಿಗಳು ಮುಗಿದ ನಂತರ ಮಕ್ಕಳು ಸುರಕ್ಷಿತವಾಗಿ ತಲುಪಿದ ಬಗ್ಗೆ ಸಂಬಂಧಿಸಿದ ಶಿಕ್ಷಕರು ಪೋಷಕರೊಂದಿಗೆ ಖಚಿತ ಪಡಿಸಿಕೊಳ್ಳುವುದು.

ತರಗತಿಗಳಲ್ಲಿ ಎಲ್ಲಾ ಮಕ್ಕಳಿಗೆ ವಯಸ್ಸಿಗನುಗುಣವಾಗಿ Safe Touch and Unsafe Touch ಬಗ್ಗೆ ತಿಳಿಸಿಕೊಡುವುದು

Online ತರಗತಿಗಳು ಮತ್ತು ಕಂಪ್ಯೂಟರ್ ಆಧಾರಿತ ತರಗತಿಗಳು ನಡೆಯುವ ವೇಳೆಯಲ್ಲಿ ವಿಷಯಾಧರಿತ ಬೋಧನೆಯ ನೀಡುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

ಶಾಲೆಗಳಲ್ಲಿ ವಿದ್ಯಾರ್ಥಿಗಳು ಕಲಿಯಲು ಕಡ್ಡಾಯವಾಗಿ ಭಯಮುಕ್ತ ಮಕ್ಕಳ ಸ್ನೇಹಿ ವಾತಾವರಣವನ್ನು ನಿರ್ಮಾಣ ಮಾಡುವುದು. ಹಾಗೂ ಮಕ್ಕಳು ದೂರಗಳನ್ನು ನೀಡಿದಲ್ಲಿ ತಮ್ಮ ಹಂತದಲ್ಲಿ ಪರಿಶೀಲಿಸಿ ಮೇಲಧಿಕಾರಿಗಳ ಗಮನಕ್ಕೆ ತರುವುದು

ದಿನನಿತ್ಯ ಮಕ್ಕಳು ಮನೆಯಿಂದ ಶಾಲೆಗೆ , ಶಾಲೆಯಿಂದ ಮನೆಗೆ ಸುರಕ್ಷಿತವಾಗಿ ತಲುಪಲು ಮಕ್ಕಳ ಪ್ರಯಾಣ ಬಗ್ಗೆ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು.

ಶಾಲಾ ಆವರಣದಲ್ಲಿ ಪೂರ್ವಾನುಮತಿ ಇಲ್ಲದೆ ಪರಿಚಿತ/ಅಪರಿಚಿತ ವ್ಯಕ್ತಿಗಳನ್ನು ಅನಗತ್ಯ ವಾಗಿ ಸೇರಿಸುವಂತಿಲ್ಲ.

ಇಲಾಖೆಯಿಂದ ನೀಡಲಾಗುತ್ತಿರುವ ಬಿಸಿಯೂಟ ಹಾಗೂ ಕ್ಷೀರಭಾಗ್ಯ ಪ್ರಕ್ರಿಯೆ ನಡೆಯುವ ಸಂದರ್ಭದಲ್ಲಿ ಮಕ್ಕಳ ಸುರಕ್ಷತೆಗೆ ಆಧ್ಯತೆ ನೀಡುವುದು. ಎಲ್ಲಾ ಶಿಕ್ಷಕರ ಮತ್ತು ಸಿಬ್ಬಂದಿಯ ಜವಾಬ್ದಾರಿಯಾಗಿರುತ್ತದೆ ಹಾಗೂ ಈ ಪ್ರಕ್ರಿಯೆ ನಡೆಯುವ ಸಮಯದಲ್ಲಿ ಎಲ್ಲಾ ಶಿಕ್ಷಕರು ಹಾಜರಿದ್ದು, ಮಕ್ಕಳು ಸುರಕ್ಷಿತವಾಗಿ ಊಟ ಮಾಡಲು ಹಾಗೂ ಊಟದ ನಂತರ ಸುರಕ್ಷಿತವಾಗಿ ತರಗತಿಗಳಿಗೆ ಹಾಜರಾಗುವ ಹಾಗೆ ನೋಡಿಕೊಳ್ಳುವುದು

ಶಾಲೆಗಳಲ್ಲಿ ಮೀನಾ ತಂಡ ಮತ್ತು CHILD RIGHTS ಕ್ಲಬ್ ರಚಿಸಿ ನಿಯಮಾನುಸಾರ ಅಗತ್ಯಕ್ರಮ ವಹಿಸುವುದು.

ಪೋಕ್ಸೋ ಕಾಯಿದೆ-2012ನ್ನು ನಿರ್ಲಕ್ಷಿಸುವುದು ನಿಮ್ಮ ಗಮನಕ್ಕೆ ಬಂದಲ್ಲಿ ಮಕ್ಕಳ ರಕ್ಷಣಾ ನೀತಿ-2016 ಮತ್ತು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಎಸ್.ಓ.ಪಿ ನಿಯಮಗಳನುಸಾರ ಕೂಡಲೆ ಇಲಾಖಾ ನಿರ್ದೇಶನದಂತೆ ಕ್ರಮವಹಿಸುವುದು

## ಅಧಿಕಾರಿಗಳ ಜವಾಬ್ದಾರಿ

ಪೋಕ್ಸೋ ಕಾಯಿದೆ-2012, ಮಕ್ಕಳ ರಕ್ಷಣಾ ನೀತಿ-2016 ಮತ್ತು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಎಸ್.ಓ.ಪಿ ನಿರ್ದೇಶನದಂತೆ ಮತ್ತು ಆರ್.ಟಿ.ಇ ಕಾಯಿದೆ 2009 ರ ನಿಯಮಗಳಂತೆ ಹಾಗೂ ಎನ್.ಇ.ಪಿ 2020ರಂತೆ ಎಲ್ಲಾ ಶಾಲೆಗಳಲ್ಲಿ ಅನುಪಾಲನೆ ಆಗುತ್ತಿರುವ ಬಗ್ಗೆ ಉಪನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿ ರವರು ಕ್ರಮ ವಹಿಸುವುದು ಹಾಗೂ ಕಾಲ ಕಾಲಕ್ಕೆ ಸೂಕ್ತ ನಿರ್ದೇಶನ ನೀಡುವುದು.

ಎಲ್ಲಾ ವೃಂದದ ಅಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ಶಾಲಾ ಭೇಟಿ ವರದಿಯಲ್ಲಿ ಅನುಪಾಲನೆ ಬಗ್ಗೆ ದಾಖಲು ಮಾಡಿ ಸೂಕ್ತ ಸಲಹೆ ಮಾರ್ಗದರ್ಶನ ನೀಡುವುದು. ಕ್ಲಸ್ಟರ್ , ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಹಂತದದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಸುರಕ್ಷತೆ ಬಗ್ಗೆ ಪುನರಾವಲೋಕನಾ ಮಾಡುವುದು.

ಇಲಾಖೆಯಿಂದ ನಿಗಧಿಗೊಳಿಸಿದ ಕ್ಲಸ್ಟರ್ , ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಹಂತದದಲ್ಲಿ ನಡೆಯುವ ಕ್ರೀಡಾಕೂಟಗಳು, ವಿವಿಧ ರೀತಿಯ ಸಾಂಸ್ಕೃತಿಕ ಚಟುವಟಿಕೆ ಕಾರ್ಯಕ್ರಮಗಳು, ಮತ್ತು ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಅನುಮತಿ ನೀಡುವ ಕುರಿತು ಪೋಕ್ಸೋ ಕಾಯಿದೆ-2012, ಮಕ್ಕಳ ರಕ್ಷಣಾ ನೀತಿ-2016 ಮತ್ತು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಎಸ್.ಓ.ಪಿ ನಿಯಮಗಳು ಒಳಗೊಂಡಂತೆ ಪ್ರತ್ಯೇಕವಾಗಿ ವಿಶೇಷ ಸೂಚನೆ ಹಾಗೂ ಷರತ್ತುಗಳನ್ನು ವಿಧಿಸಿ ಅನುಮತಿ ನೀಡಿ ಆದೇಶ ಹೊರಡಿಸುವುದು.

ಮೇಲೆ ವಿವರಿಸಿರುವ ಎಲ್ಲಾ ಅಂಶಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮವಹಿಸಲು ನಿರ್ದೇಶಿಸಿದೆ.

R 19/11/2022

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

**ಇವರಿಗೆ**

1. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ.
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ
3. ನಿರ್ದೇಶಕರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಬನಶಂಕರಿ 3ನೇ ಹಂತ ಬೆಂಗಳೂರು -85
4. ನಿರ್ದೇಶಕರು (ಗುಣಮಟ್ಟ) ಸಮಗ್ರ ಶಿಕ್ಷಣ ಕರ್ನಾಟಕ ಕೆ .ಆರ್ ಸರ್ಕಲ್ ಬೆಂಗಳೂರು
5. ಸಹ ನಿರ್ದೇಶಕರು(ಶಾಲಾ ಶಿಕ್ಷಣ),ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
6. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಮತ್ತು ಉಪನಿರ್ದೇಶಕರು(ಅಭಿವೃದ್ಧಿ), ಸಾರ್ವಜನಿಕ ಶಿಕ್ಷಣ ಇಲಾಖೆ ಮುಂದಿನ ಕ್ರಮಕ್ಕಾಗಿ
7. ರಾಜ್ಯದ ಎಲ್ಲಾ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ
8. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು (ಆಡಳಿತ) ರವರ ಮುಖಾಂತರ ಮುಂದಿನ ಕ್ರಮಕ್ಕಾಗಿ